ಸಿಸಿ ನಂಃ 187/2023

ಸಿ.ಡಬ್ಲೂ 15/

ಪಿ.ಡಬ್ಲೂ 11

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕುಮಾರ |
| ತಂದೆಯ ಹೆಸರು | ಃ | ಹನುಮಂತ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಮುಖ್ಯಪೇದೆ |
| ವಾಸ ಸ್ಥಳ | ಃ | ಧಾರವಾಡ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **02.09.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು ಕಳೆದ 5 ವರುಷಗಳಿಂದ ಧಾರವಾಡ ಗ್ರಾಮೀಣ ಪೋಲಿಸ ಠಾಣೆಯಲ್ಲಿ ಹೆಚ್ ಸಿ ಯಾಗಿ ಕೆಲಸ ಮಾಡಿರುತ್ತೇನೆ.

ದಿಃ 09.02.2022 ರಂದು ಚಾಸಾ29 ರವರು ಈ ಪ್ರಕರಣದಲ್ಲಿ ಅಪಘಾತ ಪಡಿಸಿ ಬುಲೇರೊ ವಾಹನ ಹಾಗೂ ಆರೋಪಿತರ ಪತ್ತೇಗಾಗಿ ನನಗೆ ಮೆಮೊ ನೀಡಿದ್ದು , ನಾನು ಅದೇ ದಿನ ಸವದತ್ತಿ , ಮುನವಳ್ಳಿ , ರಾಯಭಾಗ , ಗೋಕಾಕ ಹುಡುಕಾಡಿದಾಗ ಯಾವದೇ ಮಾಹಿತಿ ಸಿಗಲಿಲ್ಲ. ನಂತರ ಕೆಲವು ಬಾತ್ಮಿದಾರರಿಗೆ ನನ್ನ ಮೊಬೈಲ ಹಾಗುಾ ಚಾಸಾ29 ರವರ ಪೊನ ನಂಬರ ಕೊಟ್ಟು ಮಾಹಿತಿ ಗೊತ್ತಾದರೇ ತಿಳಿಸಿ ಎಂದು ಹೇಳಿರುತ್ತೇನೆ. ದಿಃ

ಸಿಸಿ ನಂಃ 187/2023
ಸಿ.ಡಬ್ಲೂ 15/
ಪಿ.ಡಬ್ಲೂ 11

15.02.2022 ರಂದು ಚಾಸಾ29 ರವರು ಮತ್ತೋಂದು ಮೆಮೊ ನೀಡಿದ್ದು, ಈ ಪ್ರಕರಣ ದಿದ ಆರೋಪಿತರನ್ನು ಹಾಗೂ ಅಪಘಾತ ಪಡಿಸಿ ವಾಹನದ ಪತ್ತೆಗಾಗಿ ನಿರ್ದೇಶನ ನೀಡಿದ್ದು, ನಂತರ ನನಗೆ ರಾಯಭಾಗ ತಾಲೂಕು ಕಂಕನವಾಡಿ ಗ್ರಾಮದಿಂದ ಬಾತ್ಮಿದಾರರು ಆರೋಪಿ ಮನೆಯ ಮುಂದೆ ನಾವು ಹುಡುಕುತಿತದ್ದ ಬುಲೇರೊ ವಾಹನ ಇದೆ ಎಂದು ತಿಳಿಸಿದ್ದರಿಂದ ನಾನು ಅಲಿಲಗೆ ಹೊಗಿ ನೊಡಿದಾಗ ಇನಾಮಹೊಂಗಲ ಬಸ ನಿಲ್ದಾಣದ ಹತ್ತಿರ ಅಳವಡಿಸಿದ್ದ ಸಿಸಿಟಿವಿ ಕ್ಯಾಮರಾ ದಲ್ಲಿ ಎಬಂದು ಬುಲೆರೊ ವಾಹನ ಹೊಗಿರುವುದು ಸರಿಯಾಗಿದ್ದು ಅದರಲ್ಲಿ ಕಂಡ ವಾಹನ ಹಾಗೂ ಆರೋಪಿ ಮನೆ ಮುಂದೆ ಇದ್ದ ವಾಹನ ಎರಡು ಹೋಲಿಕೆಯಾಗಿತ್ತು. ಸದರಿ ಆರೋಪಿ ಮನೆ ಮುಂದೆ ಇದ್ದ ವಾಹನ ಜಖಂಗೊಂಡಿದ್ದು ಸದರಿ ಬುಲೇರೊ ನಂ.ಕೆಎ.49/5874. ಈ ವಿಚಾರವನ್ನು ನಾನು ಮೇಲಾಧಿಕಾರಿಗೆ ಪೊನ ಮಾಡಿ ತಿಳಿಸಿರುತೆತೇನೆ. ನಂತರ ನಾನು ಆರೋಪಿ ಯನ್ನು ಸಹ ಹುಡುಕಾಡಿರುತ್ತೇನೆ. ಆದರೇ ಆತ ಸಿಗದೇ ಇದ್ದಾಗ ಆತನ ಸಂಬಂದಿಕರಿಗೆ ವಿಚಾರಣೆ ಮಾಡಿದ್ದು ಆತ ಕೆಲಸಕ್ಕೆ ಹೊರಗಡೆ ಹೊಗಿದ್ದಾನೆ ಎಂದು ತಿಳಿಸಿರುತ್ತಾರೆ. ನಂತರ ನಮ್ಮ ಮೇಲಾಧಿಕಾರಿ ನಿರ್ದೇಶನದಂತೆ ಆರೋಪಿ ಸಂಬಂದಿಕರಿಗೆ ಆರೋಪಿ ಬಂದರೇ ಠಾಣೆಗೆ ಕಳಿಸಿ ಎಂದು ಹೇಳಿ ಬಂದಿರುತ್ತೇನೆ. ನಂತರ ನಾನು ಅಲಿಲದ್ದ ವಾಹನವನ್ನು ತೆಗೆದುಕೊಂಡು ಬಂದು ಚಾಸಾ29 ರವರ ಮುಂದೆ ಹಾಜರು ಮಾಡಿರುತ್ತೇನೆ. ಈ ಬಗ್ಗೆ ವರದಿಯನ್ನು ಸಹ ನೀಡಿರುತೆತೇನೆ. ದಿಃ 09.02.2022

ರ ವರದಿಯನ್ನು **ನಿಪಿ.18** ಎಂದು , ಸಾಕ್ಷಿ ಸಹಿ **ನಿಪಿ.18(ಎ)** ಎಂದು ಗುರುತಿಸಲಾಯಿತು. ದಿಃ 16.02.2022 ರ ವರದಿಯನ್ನು **ನಿಪಿ.19** ಎಂದು , ಸಾಕ್ಷಿ ಸಹಿ **ನಿಪಿ.19(ಎ)** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

**1.** ದಿಃ 09.02.2022 ಹಾಗೂ ದಿಃ 16.02.2022 ರಂದು ನನಗೆ ಮೇಲಾಧಿಕಾರಿ ನನಗೆ ಯಾವದೇ ನಿರ್ದೇಶನ ಕೊಟ್ಟಿಲ್ಲ ಹಾಗೂ ನಾನು ಯಾವದೇ ವಾಹನ ಜಪ್ತಿ ಮಾಡಿ ತನಿಖಾಧಿಕಾರಿ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಇನಾಮಹೊಂಗಲ ರಸ್ತೆಯಲ್ಲಿ ಸಾಕಷ್ಟು ವಾಹನ ಓಡಾಡುತ್ತವೆ ಎಂದರೆ ಸರಿ. ಅಪಘಾತ ಇದೇ ವಾಹನ ಮಾಡಿತ್ತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಹಾಗೂ ಆರೋಪಿ ಮತ್ತು ಆತನ ವಾಹನಕ್ಕೂ ಯಾವದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿ ಗೆ ಸಹಾಯ ಮಾಡು ಸುಳ್ಳು ವರದಿ ನೀಡಿದ್ದೆನೆ ಎಂದರೆ ಸರಿಯಲ್ಲ. ಅದೇ ರಿತಿ ವಾಹನವನ್ನು ಠಾಣೆಯಲ್ಲಿ ತಂದು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಸಿಸಿ ನಂಃ 187/2023
ಸಿ.ಡಬ್ಲೂ 15/
ಪಿ.ಡಬ್ಲೂ 11

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.